## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** 1) ಶ್ರೀ ರಾಜೇಂದ್ರಕುಮಾರ್ ಕಡೇಮನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 2) ಶ್ರೀ ಬಸವಂತಪ್ಪ ಎಸ್ ಅಮಾತ್ಯಣ್ಣನವರ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 3) ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, 4) ಶ್ರೀ ಶೇಖರಪ್ಪ ಶಿವಪ್ಪ ಪಾವಿನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು 5) ಶ್ರೀ ಸಂಗಮೇಶ್ ಸಜ್ಜನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅತ್ತಿಗೇರಿ ಗ್ರಾಮ ಪಂಚಾಯಿತಿ, ಶಿಗ್ಗಾಂವ ತಾಲ್ಲೂಕು ಹಾವೇರಿ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ– ಅಂತಿಮ ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 635 ಗ್ರಾಪಂಕಾ 2017, ದಿನಾಂಕ: 09.08.2017.
2. ಅಪರ ನಿಬಂಧಕರು, ವಿಚಾರಣೆಗಳು–16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: UPLOK-1/ DE/1018/2017/ARE-16, ದಿನಾಂಕ: 17.03.2021.
3. ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-1/ DE/1018/2017/ARE-12, ದಿನಾಂಕ: 25.03.2021.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 49 ಗ್ರಾಪಂಕಾ 2021, ದಿ: 17.04.2021.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ಉತ್ತರ ದಿನಾಂಕ:10.05.2021.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ 1) ಶ್ರೀ ರಾಜೇಂದ್ರಕುಮಾರ್ ಕಡೇಮನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 2) ಶ್ರೀ ಬಸವಂತಪ್ಪ ಎಸ್ ಅಮಾತ್ಯಣ್ಣನವರ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 3)ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, 4) ಶ್ರೀ ಶೇಖರಪ್ಪ ಶಿವಪ್ಪ ಪಾವಿನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು 5) ಶ್ರೀ ಸಂಗಮೇಶ್ ಸಜ್ಜನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅತ್ತಿಗೇರಿ ಗ್ರಾಮ ಪಂಚಾಯಿತಿ, ಶಿಗ್ಗಾಂವ ತಾಲ್ಲೂಕು ಹಾವೇರಿ ಜಿಲ್ಲೆ ಇವರ ವಿರುದ್ಧ ಈ ಕೆಳಕಂಡ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮವಳಿಗಳು 1957 ರ ನಿಯಮ 14–ಎ ರಡಿಯಲ್ಲಿ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲಾಗಿತ್ತು.

**" ದೋಷಾರೋಪಣೆ":–**

1. 1 ರಿಂದ 5ನೇ ಆಪಾದಿತ ನೌಕರರು ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸಂಬಂಧಪಟ್ಟಂತೆ 2010 ರಿಂದ 2015 ನೇ ಸಾಲಿನವರೆಗಿನ ಇಂದಿರಾ ಆವಾಸ್. ಬಸವ ವಸತಿ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಆಯ್ಕೆಯಾಗಿದ್ದ 42 ಫಲಾನುಭವಿಗಳ ಪೈಕಿ 13 ಫಲಾನುಭವಿಗಳು ಮನೆಗಳನ್ನು ನಿರ್ಮಿಸದೆ ಬೇರೆ ಮನೆಗಳ ಜಿಪಿಎಸ್ ಮತ್ತು ಛಾಯಚಿತ್ರಗಳನ್ನು ದತ್ತಾಂಶದಲ್ಲಿ ಅಳವಡಿಸಿ ರೂ. 6,26,300/– ಗಳನ್ನು ಬಿಡುಗಡೆ ಮಾಡಲು ನೀವುಗಳು ಅಂದರೆ 1 ರಿಂದ 5 ನೇ ಆಪಾದಿತ ಸರ್ಕಾರಿ ನೌಕರರುಗಳು ಅನುವು ಮಾಡಿಕೊಟ್ಟು ಆ ಮೂಲಕ ನೀವುಗಳು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡೆತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.
2. 1 ರಿಂದ 5ನೇ ಆಪಾದಿತ ನೌಕರರು ಅತ್ತಿಗೇರಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸಂಬಂಧಪಟ್ಟಂತೆ 2010 ರಿಂದ 2015 ನೇಯ ಸಾಲಿನವರೆಗಿನ ಇಂದಿರಾ ಆವಾಸ್, ಬಸವ ವಸತಿ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದ ಕೋಟಾದಡಿಯಲ್ಲಿ 5 ಸಾಮಾನ್ಯ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡಿ ಆ ಸಂಬಂಧ

ಮಾನ್ಯ ಉಪಲೋಕಾಯುಕ್ತರವರು ಶಿಫಾರಸ್ಸು ಮಾಡಿರುವಂತೆ ಇವರಿಗೆ " ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 5% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ಮತ್ತು ಇವರಿಗೆ ಪಾವತಿಸುವ ಪಿಂಚಣಿಯಲ್ಲಿ ರೂ. 29,800/- ಗಳನ್ನು ವಸೂಲಿ ಮಾಡುವ ದಂಡನೆ " ವಿಧಿಸಲು ಮತ್ತು ಈ ಪ್ರಕರಣದಲ್ಲಿನ ಆಪಾದಿತ ಸರ್ಕಾರಿ ನೌಕರ-1 ಆದ ಶ್ರೀ ರಾಜೇಂದ್ರಕುಮಾರ್ ಕಡೇಮನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ದಿನಾಂಕ: 02.02.2020 ರಂದು ಮರಣ ಹೊಂದಿರುವುದರಿಂದ ಇವರನ್ನು ಪ್ರಕರಣದಿಂದ ಕೈಬಿಡಲು ಹಾಗೂ ಈ ಪ್ರಕರಣದಲ್ಲಿನ ಆಪಾದಿತ ಸರ್ಕಾರಿ ನೌಕರ-3 ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಆಪಾದಿತ ಸರ್ಕಾರಿ ನೌಕರ-4 ಶ್ರೀ ಶೇಖರಪ್ಪ ಶಿವಪ್ಪ ಪಾವಿನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಆಪಾದಿತ ಸರ್ಕಾರಿ ನೌಕರ-5 ಶ್ರೀ ಸಂಗಮೇಶ್ ಸಜ್ಜನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅತ್ತಿಗೇರಿ ಗ್ರಾಮ ಪಂಚಾಯಿತಿ, ಶಿಗ್ಗಾಂವ ತಾಲ್ಲೂಕು ಹಾವೇರಿ ಜಿಲ್ಲೆ ಇವರುಗಳ ವಿರುದ್ಧ ಆರೋಪ ಸಾಬೀತಾಗದಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ಆರೋಪಮುಕ್ತರನ್ನಾಗಿಸಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 49 ಗ್ರಾಪಂಕಾ 2021, ಬೆಂಗಳೂರು, ದಿನಾಂಕ:-24.02.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಪ್ರಕರಣದಲ್ಲಿನ ಆಪಾದಿತ ಸರ್ಕಾರಿ ನೌಕರ-2 ಆದ ಶ್ರೀ ಬಸವಂತಪ್ಪ ಎಸ್ ಅಮಾತ್ಯಣ್ಣನವರ, ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪ್ರಸ್ತುತ ನಿವೃತ್ತ) ಅತ್ತಿಗೇರಿ ಗ್ರಾಮ ಪಂಚಾಯಿತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ನಿಯಮ 214(1)(ಬಿ) ರನ್ವಯ ಇವರಿಗೆ " ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 5% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ಮತ್ತು ಇವರಿಗೆ ಪಾವತಿಸುವ ಪಿಂಚಣಿಯಲ್ಲಿ ರೂ. 29,800/- ಗಳನ್ನು ವಸೂಲಿ ಮಾಡುವ ದಂಡನೆ " (For imposing penalty of withholding 5% of pension payable to DGO-2 for a period of 5 Years, apart from recovering a sum of Rs. 29,800/- from the pension payable to DGO-2 Sri Basavanthappa S Amatennavar) ವಿಧಿಸಿ ಆದೇಶಿಸಿದೆ.

ಮುಂದುವರೆದು, ಈ ಪ್ರಕರಣದಲ್ಲಿನ ಆಪಾದಿತ ಸರ್ಕಾರಿ ನೌಕರ-1 ಆದ ಶ್ರೀ ರಾಜೇಂದ್ರಕುಮಾರ್ ಕಡೇಮನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ದಿನಾಂಕ: 02.02.2020 ರಂದು ಮರಣ ಹೊಂದಿರುವುದರಿಂದ ಇವರನ್ನು ಈ ಪ್ರಕರಣದಿಂದ ಕೈಬಿಟ್ಟಿದೆ ( abate) ಹಾಗೂ ಈ ಪ್ರಕರಣದಲ್ಲಿನ ಆಪಾದಿತ ಸರ್ಕಾರಿ ನೌಕರ-3 ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಆಪಾದಿತ ಸರ್ಕಾರಿ ನೌಕರ-4 ಶ್ರೀ ಶೇಖರಪ್ಪ ಶಿವಪ್ಪ ಪಾವಿನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಆಪಾದಿತ ಸರ್ಕಾರಿ ನೌಕರ-5 ಶ್ರೀ ಸಂಗಮೇಶ್ ಸಜ್ಜನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅತ್ತಿಗೇರಿ ಗ್ರಾಮ ಪಂಚಾಯಿತಿ, ಶಿಗ್ಗಾಂವ ತಾಲ್ಲೂಕು ಹಾವೇರಿ ಜಿಲ್ಲೆ ಇವರುಗಳ ವಿರುದ್ಧದ ಆರೋಪದಿಂದ ದೋಷಮುಕ್ತರನ್ನಾಗಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
M. M. 24/2/22
*(ರಾಜು ಎಂ.ಎಂ)*
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

..5

3. ಅಪರ ನಿಬಂಧಕರು-16, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾವೇರಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಶಿಗ್ಗಾಂವ, ಹಾವೇರಿ ಜಿಲ್ಲೆ.

1) ಶ್ರೀ ರಾಜೇಂದ್ರಕುಮಾರ್ ಕಡೇಮನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 2) ಶ್ರೀ ಬಸವಂತಪ್ಪ ಎಸ್ ಅಮಾತ್ಯಣ್ಣನವರ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 3) ಶ್ರೀ ಮಲ್ಲಪ್ಪ ದೇವಪ್ಪ ವಿಜಾಪುರ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, 4) ಶ್ರೀ ಶೇಖರಪ್ಪ ಶಿವಪ್ಪ ಪಾವಿನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು 5) ಶ್ರೀ ಸಂಗಮೇಶ್ ಸಜ್ಜನ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅತ್ತಿಗೇರಿ ಗ್ರಾಮ ಪಂಚಾಯಿತಿ, ಶಿಗ್ಗಾಂವ ತಾಲ್ಲೂಕು ಹಾವೇರಿ ಜಿಲ್ಲೆ **(ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಶಿಗ್ಗಾಂವ, ಹಾವೇರಿ ಜಿಲ್ಲೆ ಇವರ ಮುಖಾಂತರ)**

6. ಗಣಕ ಕೋಶ, ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ/ಪ್ರತಿ.